ಆಗ ನಮಗೆ ಉಚಿತ ವಿದ್ಯಾರ್ಥಿನಿಲಯ ಇರಲಿಲ್ಲ. ಹಣ ತೆತ್ತು ವಿದ್ಯಾರ್ಥಿನಿಲಯ ಸೇರೊ ಆರ್ಥಿಕ ಶಕ್ತಿ ಇರಲಿಲ್ಲ. ಆರಂಭದಲ್ಲಿ ಇದ್ದಿಲು ಸ್ಟೌನಲ್ಲಿ ಅಡುಗೆ. ಎಂ.ಎ. ಓದುವಾಗ ಸೀಮೆಎಣ್ಣೆ ಸ್ಟೌಗೆ ಪ್ರಮೋಷನ್. ಹಿಂಗೆ ಸಾಗಿತ್ತು ಶಿಕ್ಷಣ. ಇನ್ನು ಸಾಹಿತ್ಯಾಭಿರುಚಿ ಬಗ್ಗೆ ಹೇಳಬೇಕು ಅಂದ್ರೆ, ನಾನು ಮೊದಲೇ ಹೇಳಿದೆ ನೋಡಿ, ವಿಶಿಷ್ಟವಾಗಿ ಬೆಳೀಬೇಕು ಅನ್ನೋ ಆಸೆ ಮಾತ್ರ ಇತ್ತು. ನಾನ್ಯಾಕೆ ಕವಿ ಆಗಬಾರದು ಅಂತ ಮಾಧ್ಯಮಿಕ ಶಾಲೆಯಲ್ಲೇ ಅನ್ನಿಸಿತ್ತು. ಈ ಒಳ ಅನಿಸಿಕೆಗೆ ಒತ್ತಾಸೆಯಾಗಿದ್ದು ನಮಗೆ ಉಪಪಠ್ಯ ಪುಸ್ತಕವಾಗಿದ್ದ ‘ನನ್ನ ಬಾಲ್ಯ’. ಇದು ರವೀಂದ್ರನಾಥ ಟ್ಯಾಗೋರರ ಬಾಲ್ಯ ಬದುಕಿನ ಆತ್ಮಕಥೆಯ ಭಾಗ. ಇದರಲ್ಲಿ ಬಾಲಕ ಟ್ಯಾಗೋರರು ಪದ್ಯ ಬರೆದು ತರಗತಿಯಲ್ಲಿ ಓದಿದಾಗ ಸಹಪಾಠಿಗಳು ಚಪ್ಪಾಳೆ ತಟ್ಟಿದ್ದು, ಅಧ್ಯಾಪಕರು ಮೆಚ್ಚಿದ್ದು ನಿರೂಪಿತವಾಗಿದೆ. ನಾನೂ ಯಾಕೆ ಹಾಗೆ ಆಗಬಾರದು ಅನಿಸಿತ್ತು. ಇದೇ ಸಂದರ್ಭದಲ್ಲಿ ನನ್ನ ಆತ್ಮೀಯ ಸಹಪಾಠಿ ಮಡ್ಡಿ ಮಾರಯ್ಯ ಅರ್ಧಕ್ಕೆ ಶಾಲೆ ತೊರೆದುಬಿಟ್ಟ. ಆ ದಿನಗಳಲ್ಲಿ ನಾನು ನಟ ರಾಜಕುಮಾರ್ ಅವರ ಅಭಿನಯದ ‘ಓಹಿಲೇಶ್ವರ’ ಸಿನಿಮಾನ ಟೂರಿಂಗ್ ಟಾಕೀಸಿನಲ್ಲಿ ನೋಡಿದ್ದೆ. ಅದರಲ್ಲಿ, ‘ಈ ದೇಹದಿಂದ ದೂರವಾದೆ ಏಕೆ ಆತ್ಮನೇ’ ಎಂಬ ಒಂದು ಹಾಡು ಇದೆ. ನಾನು ನನ್ನ ಗೆಳೆಯನನ್ನು ನೆನೆಯುತ್ತ ಇದೇ ಧಾಟಿಯಲ್ಲಿ ‘ಈ ಶಾಲೆಯಿಂದ ದೂರನಾದೆ ಏಕೆ ಗೆಳೆಯನೆ’ ಎಂದು ಒಂದು ಪದ್ಯ ಬರೆದು ಓದಿದೆ. ನನಗೂ ಚಪ್ಪಾಳೆಯ ಪ್ರಶಂಸೆ ಬಂತು. ಆಗ ನನ್ನ ಮೆಚ್ಚಿನ ಮೇಷ್ಟ್ರಾಗಿದ್ದ ಟಿ.ವೈ. ನಾಗಭೂಷಣರಾವ್ ಅವರು ಮೆಚ್ಚಿ ಪ್ರೋತ್ಸಾಹಿಸಿದರು. ಹೈಸ್ಕೂಲಿಗೆ ಬಂದಾಗ ತರಗತಿಯ ಓದಿಗೇ ಆದ್ಯತೆ. ಅಂದಿನ ದಿನಗಳಲ್ಲಿ ಹೈಸ್ಕೂಲಿನ ಎರಡನೇ ತರಗತಿಗೆ ಐಚ್ಛಿಕ ವಿಷಯ ಆಯ್ಕೆ ಮಾಡಿಕೊಳ್ಳಬೇಕಿತ್ತು. ನಾನು ಹೈಸ್ಕೂಲ್ ಎರಡನೇ ತರಗತಿಯಿಂದ ಪಿಯುಸಿ ಮುಗಿಯುವವರೆಗೆ ವಿಜ್ಞಾನ ಮತ್ತು ಗಣಿತ ವಿಷಯಗಳನ್ನು ಐಚ್ಛಿಕ ವಿಷಯವಾಗಿ ಓದಿದೆ. ಮೂಲತಃ ವಿಜ್ಞಾನದ ವಿದ್ಯಾರ್ಥಿಯಾದ ನಾನು ಬಿ.ಎ. ಸೇರಿದಾಗ ಅನೇಕರಿಗೆ ಆಶ್ಚರ್ಯ! ವಿಜ್ಞಾನ ಮತ್ತು ಗಣಿತದಲ್ಲಿ ಕಡಿಮೆ ಅಂಕ ಬಂದಿದ್ದಕ್ಕೇ ಕಲಾ ವಿಭಾಗಕ್ಕೆ ಬಂದಿದ್ದಾನೆ, ಆದ್ದರಿಂದಲೇ ಕನ್ನಡ ಸಾಹಿತ್ಯವನ್ನು ಐಚ್ಛಿಕವಾಗಿ ತೆಗೆದುಕೊಂಡಿದ್ದಾನೆ ಎಂದುಕೊಂಡವರೂ ಇದ್ದರು. ಆದರೆ, ಆಗ ಮತ್ತೆ ಚಿಗುರಿದ ಸಾಹಿತ್ಯಾಸಕ್ತಿಯಿಂದ ನಾನು ಕನ್ನಡದ ವಿಶೇಷಾಧ್ಯಯನಕ್ಕೆ ಮುಂದಾಗಿದ್ದೆ. ವಿಜ್ಞಾನ ವಿಷಯದಲ್ಲಿ ನನಗೆ ಪಿಯುಸಿಯಲ್ಲಿ ಶೇಕಡಾ 86 ಅಂಕಗಳು ಬಂದಿದ್ದವು. ಅನುಮಾನವನ್ನು ಹೋಗಲಾಡಿಸಲು ನಾನು ಮಾರ್ಕ್ಸ್‌ಕಾರ್ಡನ್ನು ಅನೇಕರಿಗೆ ತೋರಿಸುತ್ತ ಮಾರ್ಕ್ಸ್‌ವಾದಿಯಾದೆ! ಎಂದು ತಮಾಷೆಗೆ ಹೇಳುತ್ತಿರುತ್ತೇನೆ. ಆದರೆ, ಸತ್ಯ ಎಂದರೆ ಮುಂದೆ ಕಾರ್ಲ್‌ಮಾರ್ಕ್ಸ್, ಗಾಂಧಿ, ಅಂಬೇಡ್ಕರ್ ಅವರ ಚಿಂತನೆಗಳಿಂದ ನಾನು ಪ್ರಭಾವಿತನಾದೆ. ಅವರನ್ನು ಓದುತ್ತ, ಅರ್ಥಮಾಡಿಕೊಳ್ಳುತ್ತ ಬೆಳೆದೆ.

◆ **ಬೆಂಗಳೂರಿಗೆ ಬಂದಮೇಲೆ ಯಾರೆಲ್ಲರ ಒಡನಾಟ ಸಿಕ್ಕಿತು? ಇದರಿಂದ ನಿಮ್ಮ ಸಾಹಿತ್ಯದ ತಿಳಿವಳಿಕೆಗೆ ಆದ ಪ್ರಯೋಜನವೇನು?**

ನಾನು ಬೆಂಗಳೂರಿಗೆ ಬಂದದ್ದು ಎಂ.ಎ. ವ್ಯಾಸಂಗಕ್ಕಾಗಿ. ಆಗ ರಂ.ಶ್ರೀ. ಮುಗಳಿಯವರು ಕನ್ನಡ ವಿಭಾಗದ ಮುಖ್ಯಸ್ಥರು. ನಾನು ಎಂ.ಎ. ಕೊನೆಯ ಹಂತ ತಲುಪಿದಾಗ ಜಿ.ಎಸ್. ಶಿವರುದ್ರಪ್ಪನವರು ಮುಖ್ಯಸ್ಥರಾದರು. ಎಂ. ಚಿದಾನಂದಮೂರ್ತಿ, ಎನ್.ಎಸ್. ಲಕ್ಷ್ಮೀನಾರಾಯಣಭಟ್ಟ, ಎಂ.ವಿ. ಸೀತಾರಾಮಯ್ಯ, ಕೆ.ಎಂ. ಕೃಷ್ಣರಾವ್, ಕೆ. ಮರುಳಸಿದ್ದಪ್ಪ, ಹು.ಕಾ. ಜಯದೇವ್ ಇವರೆಲ್ಲ ಅಧ್ಯಾಪಕರು. ನಿಮಗೆ ಆಶ್ಚರ್ಯ ಅನ್ನಿಸಬಹುದು, ನಾನು ಎಂ.ಎ. ಓದುವಾಗ ವಿಶೇಷ ವಿಷಯವಾಗಿ ಆಯ್ಕೆ ಮಾಡಿಕೊಂಡಿದ್ದು ‘ಶಾಸನಶಾಸ್ತ್ರ’. ಆದರೆ, ಇದೇ ಅಧ್ಯಯನ ಕೇಂದ್ರದಲ್ಲಿ ಅಧ್ಯಾಪಕನಾಗಿದ್ದಾಗ ವಿಶೇಷ ವಿಷಯವಾಗಿ ಪಾಠ ಮಾಡಿದ್ದು ಜಾನಪದಶಾಸ್ತ್ರ ಮತ್ತು ಸಂಸ್ಕೃತಿ